# ಒರಿಜಿನಲ್ ನಗು

■ ದೇವು ಹನೆಹಳ್ಳಿ
ಕಲೆ: ಸಂತೋಷ್ ಸಸಿಹಿತ್ಲು

ಪುತ್ತೂರು, ಒರಿಜಿನಲ್ ಪುತ್ತೂರು, ಒರಿಜಿನಲ್ ಪುತ್ತೂರು! ಬನ್ನಿ ಬನ್ನಿ! ಎಲ್ರಿಗೂ ಒಂದೇ ರೇಟ್!

ಬಿ.ಸಿ. ರೋಡ್ ಬಸ್‌ಸ್ಟ್ಯಾಂಡ್ ತಲುಪುತ್ತಿದ್ದಂತೆ ಫುಟ್‌ಬೋರ್ಡ್ ಮೇಲೆ ನಿಂತಿದ್ದ ಕಂಡಕ್ಟರ್ ಹೇಳಿದಾಗ ಅಲ್ಲಿಯೇ ಪಕ್ಕದ ಸೀಟಿನಲ್ಲಿ ಕುಳಿತಿದ್ದ ನಾನು ನಸುನಕ್ಕು ಅವರ ಮುಖ ನೋಡಿದೆ. ಮುಖದ ಮೇಲೆ ಮೂರ್‍ನಾಲ್ಕು ದಿನಗಳ ಕೊಳೆ. ನಿದ್ದೆ ಮಾಡಿಲ್ಲವೇನೋ ಎಂಬಂತೆ ಕಾಣಿಸುತ್ತಿದ್ದ ನಿಸ್ತೇಜ ಕಣ್ಣುಗಳು.

... ಉಂಟು! ಮಾಣಿ, ಜನಪ್ರಿಯ ಎಲ್ಲಾ ಸ್ಟಾಪ್ ಉಂಟು... ಬನ್ನಿ!

ಬಸ್ಸು ನಿಂತಿತು. ಮಂಗಳೂರಿನಿಂದಲೇ ಅವರ ಮಾತುಗಳನ್ನು ಕೇಳಿಸಿಕೊಳ್ಳುತ್ತಿದ್ದೆ. ಜೋಕ್ ಅಥವಾ ಅಧಿಕ ಪ್ರಸಂಗದ ಮಾತುಗಳಲ್ಲ; ಅವು ಒಂಥರಾ ದೂರುಗಳು, **comfortness**, ಎಂಬ ಭಾವನೆಯನ್ನು ತರುತ್ತಿದ್ದವು ಅವರ ಹಣೆಯ ಮೇಲಿನ ನೆರಿಗೆಗಳು, ಹಲ್ಲು ತೋರಿಸದ ತುಟಿಗಳು ಮತ್ತು ಎತ್ತರಿಸದ ದನಿ. ಯಾರು ಏನೇ ಹೇಳಿದರೂ, ಕೇಳಿದರೂ, ಕೇಳದಿದ್ದರೂ ಅದಕ್ಕೊಂದು ಉತ್ತರ ಮತ್ತೊಂದು ಷರಾ. ಕೆಲವೊಮ್ಮೆ ಪ್ರಶ್ನೆಯ ಅಗತ್ಯವಿಲ್ಲದ ಉತ್ತರಗಳು. ಗುರಿಯಿರದೆ ಬಿಟ್ಟ ಮೊಂಡು ಬಾಣಗಳು. ಆ ಷರಾದಲ್ಲಿ ಏನೋ ಒಂದು ಸಂಕಟ. ಕೇಳಿಸಿಕೊಂಡವರಿಗೆ ಕಿರಿಕಿರಿಯಿಲ್ಲದ, ಸಿಟ್ಟು ತರದ ಸಂಕಟ. ಮುಂದೆ ಹೋಗಿ ಸರ್... ಮುಂದೆ ಹೋಗಿ! ನಿಲ್ಲಬೇಡಿ, ಇಳಿಯುವವರಿಗೆ ದಾರಿ ಬಿಡಿ... ಬಸ್ಸಿನ ಮುಂದಿಂದ ಕ್ರಾಸ್ ಮಾಡಬೇಡಿ, ಬಸ್ಸಿಗೆ ಕಣ್ಣಿಲ್ಲ.

ಆ ದಿನ ನನಗೆ ಮುಂದಿನ ದಿನಗಳ ಅಂದಾಜಿರಲಿಲ್ಲ. ಮತ್ತೆ ಒಂದೇ ವಾರದಲ್ಲಿ ನಿಗದಿಯಾಯಿತು. ಅದರ ಮುಂದಿನ ವಾರದಿಂದ ದಿನವೂ ಕಚೇರಿಯ ಕೆಲಸದ ನಿಮಿತ್ತ ಮಂಗಳೂರಿನಿಂದ ಬಿ.ಸಿ ರೋಡಿಗೆ ಹೋಗಿ ಬರುವುದು. ಕೆಲವೊಮ್ಮೆ ಅದು ಮೇಲ್ಕಾರಿಗೆ ಮುಂದುವರಿಯುತ್ತಿತ್ತು. ಒಂದೆರಡು ಬಾರಿ ಕಲ್ಲಡ್ಕಕ್ಕೂ ವಿಸ್ತರಣೆ ಆದದ್ದುಂಟು. ಮಂಗಳೂರಿನ ನನ್ನ ಆಫೀಸಿಗೆ ಬೆಳಿಗ್ಗೆ ಹೋಗಿ ಮುಖ ತೋರಿಸಿ, ಒಂದಷ್ಟು ಕೆಲಸ ಮುಗಿಸಿ 10.30ರ ಹೊತ್ತಿಗೆ ಹೊರಟರೆ ಬಿ.ಸಿ ರೋಡಿಗೆ ಅವರು ಕಂಡಕ್ಟರ್ ಆಗಿರುವ ಬಸ್ ಹೆಚ್ಚಾಗಿ ಸಿಗುತ್ತಿತ್ತು. ಆದರೆ ನಾನು ಬಸ್ ಹತ್ತುವಲ್ಲಿ ಬಿ.ಸಿ ರೋಡಿಗೆ ನಿಮಿಷಕ್ಕೊಂದು ಬಸ್ ಇರುವ ಕಾರಣ ಇಂತದೇ ಬಸ್ ಎಂದು ಕಾಯುವ ಅಗತ್ಯ ಇರಲಿಲ್ಲ. ಆದುದರಿಂದ ಅವರ ಬಸ್ಸಿನ ನಂತರವೋ, ಮೊದಲೋ ಯಾವುದಾದರೊಂದು ಬಸ್ ಸಿಗುತ್ತಿತ್ತು. ಒಂದೆರಡು ಬಾರಿ ಬೇರೆ ಬಸ್ ಸಿಕ್ಕಿದರೂ ಅವರ ಬಸ್ಸಿಗಾಗಿ ಕಾದಿದ್ದೆನೇ? ಗೊತ್ತಿಲ್ಲ. ಹಾಗೆ ಒಂದು ಬಾರಿ ಅವರಿಲ್ಲದ ಅವರ ಬಸ್ ಬಂದಿತ್ತು! ರಜೆಯೋ ಏನೋ? ಮೊದಲ ಬಾರಿ ಕಲ್ಲಡ್ಕಕ್ಕೆ ಹೋಗುವಾಗ ಕಲ್ಲಡ್ಕದಲ್ಲಿ ಸ್ಟಾಪ್ ಉಂಟಾ? ಎಂದು ಕೆಳಗೆ ನಿಂತೇ ಕೇಳಿದೆ.

‘ಹೋಯ್! ಏನ್ ಕೇಳ್ತೀರಿ ಕಲ್ಲಡ್ಕದ ಪ್ರೆಸ್ಟೀಜ್! ಒಂದು ಕಿಲೋಮೀಟರಿಗೆ ಮೂರು ಸ್ಟಾಪ್! ಕೆಟಿ 1, ಕೆಟಿ 2, ಮಧ್ಯೆ ಕಲ್ಲಡ್ಕ! ಬನ್ನಿ ಬನ್ನಿ, ನಿಮ್ಮ **choice** ಎಂದರು. ನಕ್ಕು ಬಸ್ ಹತ್ತಿದೆ. ನನಗೆ ಹೀಗೆ ವಾರಕ್ಕೆ 3–4 ಬಾರಿ ಹೋಗುವ ಕೆಲಸ ಇರುತ್ತಿತ್ತು. ಇದರಿಂದಾಗಿ ಬಿ.ಸಿ ರೋಡ್ ಮತ್ತು ಬಂಟ್ವಾಳದ ನನ್ನ ಹಳೆಯ ಪರಿಚಯಗಳನ್ನೆಲ್ಲ ಪುನಃ ತಡಕಾಡುವ ಅವಕಾಶ ಸಿಕ್ಕಿತು. ಕಂಡಕ್ಟರ್ ಜತೆಗೂ ಮುಖ ಪರಿಚಯ ಆಗುವಷ್ಟು ದಿನ ಕಳೆಯಿತು. ಅಂತೂ ನೀವು ಕೂಡ ಬೀದಿಪಾಲಾದಿರಿ ನನ್ನ ಹಾಗೇ ಎಂದರು ಆ ದಿನ. ಈಗೀಗ ನನಗೂ ಕಷ್ಟವಾಗುತ್ತಿತ್ತು. ಅಸಾಧ್ಯ ಸೆಕೆ. ಯಾರೋ ‘ಉಫ್ ಉಫ್’ ಎಂದು ಊದಿಕೊಳ್ಳುತ್ತಾ, ಅಂಗಿಯ ಮುಂದಿನ ಗುಬ್ಬಿ ತೆಗೆದು ಕೈಲಿದ್ದ ಪೇಪರ್ ಹಿಡಿದು ಎದೆಗೆ ಗಾಳಿ ಬೀಸಿಕೊಳ್ಳುತ್ತಾ ಕೆಲವು ಬಸ್ಸಿನಲ್ಲಿ ಇರುತ್ತದೆ ನೋಡಿ, ಮೇಲೆ ಕಂಡಿ ಓಪನ್ ಮಾಡಿದರೆ ‘ರುಮುರುಮು’ ಗಾಳಿ ಒಳಗೆ ನುಗ್ಗುತ್ತದೆ... ಅದಿದ್ದರೆ ಒಳ್ಳೆಯದಿತ್ತು... ಅಲ್ವೇ ಕಂಡಕ್ಟ್ರೇ? ಎಂದರು. ಅದಕ್ಕೆ ಇವರು ಮಳೆಗಾಲದಲ್ಲಿ

